**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1297 (1428) |
| ಸದಸ್ಯರ ಹೆಸರು | ಶ್ರೀ ಹೆಚ್. ಪಿ. ಸುಧಾಮ್ ದಾಸ್ (ನಾಮನಿರ್ದೇಶಿತರು) |
| ಉತ್ತರಿಸುವ ದಿನಾಂಕ | 18.12.2025 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೆ.ಪಿ.ಎಸ್.ಸಿ ನಡೆಸುತ್ತಿರುವ ಗೆಜೆಟೆಡ್ ಪ್ರೊಬೇಷನರ್ಸ್ 2023-24ರ ಹುದ್ದೆ ನೇಮಕಾತಿ ಪ್ರಕ್ರಿಯೆಯಲ್ಲಿ ಒಳಮೀಸಲಾತಿ (ಮಧ್ಯಂತರವಾಗಿ) ಅಳವಡಿಸಿ ನೇಮಕಾತಿ ಪ್ರಕ್ರಿಯೆ ನಡೆಸಲಾಗುತ್ತಿದೆಯೇ; | ಇಲ್ಲ. |
| ಆ | ಇಲ್ಲವಾದಲ್ಲಿ ಮರಿಪಟ್ಟಿ ನಾಗರಾಜ್ ಮತ್ತು ಇತರರು V/S ಆಂಧ್ರಪ್ರದೇಶ ಸರ್ಕಾರ ಮತ್ತು ಇತರರು Case No (Appeal Civil 4868 of 2007)ರ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರವು ಸಂವಿಧಾನಾತ್ಮಕವಾಗಿ ಮೀಸಲಾತಿ ನೀತಿಯನ್ನು ಪೂರ್ವಾನ್ವಯವಾಗಿ ತಿದ್ದುಪಡಿ ಮಾಡುವ ಸಂವಿಧಾನಿಕ ಅಧಿಕಾರ ಹೊಂದಿದೆ ಎಂದು ಆದೇಶಿಸಿದ್ದು ಮತ್ತು ಒಳಮೀಸಲಾತಿ ಸಂವಿಧಾನಿಕ ಎಂದು ದವೀಂದ್ರ ಸಿಂಗ್ ವರ್ಸಸ್ ಪಂಜಾಬ್ ರಾಜ್ಯ ಸರ್ಕಾರ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಆದೇಶಿಸಿದ್ದು ಸರ್ಕಾರವು ಮೇಲ್ಕಂಡ ಎರಡು ತೀರ್ಪಿನ ಅನುಸಾರ ಗೆಜೆಟೆಡ್ ಪ್ರೊಬೇಷನರ್ಸ್ 2023-24 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಪೂರ್ವ ಅನ್ವಯವಾಗಿ ಒಳಮೀಸಲಾತಿ ಅನ್ವಯಿಸುವ ಅವಕಾಶ ಇದ್ದಮೇಲೆ ಸರ್ಕಾರ ಒಳಮೀಸಲಾತಿಯನ್ನು ಮೇಲ್ಕಂಡ ನೇಮಕಾತಿ ಪ್ರಕ್ರಿಯೆಯಲ್ಲಿ ಅಳವಡಿಸಲು ಇರುವ ಅಡ್ಡಿ ಏನು? | ದಿನಾಂಕ: 04.09.2025 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ, ದಿನಾಂಕ: 28.10.2024ರ ಹಿಂದೆ ನೇರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿ ದಿನಾಂಕ: 28.10.2024ರ ನಂತರ ಯಾವುದೇ ತಿದ್ದುಪಡಿ ಅಧಿಸೂಚನೆಗಳನ್ನು ಹೊರಡಿಸದೇ ಇದ್ದಲ್ಲಿ ಅಂತಹ ನೇಮಕಾತಿ ಅಧಿಸೂಚನೆ / ಪ್ರಕ್ರಿಯೆಗಳನ್ನು ಮುಂದುವರೆಸಬಹುದಾಗಿರುತ್ತದೆ.<br><br>2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರುಗಳ ನೇಮಕಾತಿ ಪ್ರಕ್ರಿಯೆಯನ್ನು ದಿನಾಂಕ:28.10.2024ರ ಪೂರ್ವದಲ್ಲಿಯೇ ಪ್ರಾರಂಭಿಸಲಾಗಿರುವುದರಿಂದ, ನೇಮಕಾತಿ ಅಧಿಸೂಚನೆಯಂತೆ ಮುಂದುವರೆಸಲಾಗಿರುತ್ತದೆ. |

**ಸಂಖ್ಯೆ: ಸಿಆಸುಇ 171 ಎಸ್‌ಎಸ್‌ಸಿ 2025**

(ಸಿದ್ಧರಾಮಯ್ಯ)
ಮುಖ್ಯಮಂತ್ರಿ